# ಎಡಿನ್‌ಬರ್ಗ್ ವಿಜ್ಞಾನ ಮೇಳ

■ **ವಿಕ ಸುದ್ದಿಲೋಕ** ಬೆಂಗಳೂರು

'ಭಾರತೀಯ ಸಿಟಿ' ವತಿಯಿಂದ ನಗರದಲ್ಲಿ 26ನೇ ಎಡಿನ್‌ಬರ್ಗ್ ಅಂತಾರಾಷ್ಟ್ರೀಯ ವಿಜ್ಞಾನ ಮೇಳ ಆಯೋಜಿಸಲಾಗಿದೆ.

ಹೆಬ್ಬಾಳ ಸಮೀಪದ 'ಭಾರತೀಯ ಸಿಟಿ' ಆವರಣದಲ್ಲಿ ಆ.30ರಿಂದ ಸೆ.8ರವರೆಗೆ ನಡೆಯುತ್ತದೆ. 10 ದಿನಗಳ ಮೇಳದಲ್ಲಿ ಶಾಲಾ ಮಕ್ಕಳು, ಪೋಷಕರು ಸೇರಿ ಸುಮಾರು 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ಭಾರತೀಯ ಸಮೂಹದ ಅಧ್ಯಕ್ಷ ಸ್ನೇಹ ದೀಪ್ ಅಗರವಾಲ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಎಡಿನ್‌ಬರ್ಗ್ ಅಂತಾರಾಷ್ಟ್ರೀಯ ವಿಜ್ಞಾನ ಮೇಳ ಇಡೀ ವಿಶ್ವದಲ್ಲಿ ಹೆಸರುವಾಸಿಯಾಗಿದ್ದು, 25 ವರ್ಷಗಳ ನಂತರ ಮೊದಲ ಬಾರಿಗೆ ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ. ಆ ಮೂಲಕ ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ಉತ್ತೇಜಿಸಲಾಗುವುದು. ಎಡಿನ್‌ಬರ್ಗ್ ಮೇಳದಲ್ಲಿ 15 ಚರ್ಚಾ ಕಾರ್ಯಾಗಾರಗಳು, ನೇರ ಪ್ರಸಾರಗಳು, ಆರೋಗ್ಯ, ಸೌರವಿದ್ಯುತ್, ತಂತ್ರಜ್ಞಾನ, ಖಗೋಳಶಾಸ್ತ್ರ, ಗಣಿತ ಹಾಗೂ ಇತರೆ ಕ್ಷೇತ್ರಗಳ ಬಗ್ಗೆ ನಾನಾ ವಯೋಮಾನದ ಜನರಿಗೆ ಪ್ರತ್ಯೇಕ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದರು.

ಇಐಎಸ್‌ಎಫ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಾ. ಸೈಮನ್ ಗೇಜ್, ಭಾರತದಲ್ಲಿನ ಬ್ರಿಟನ್ ಉಪ ಹೈಕಮೀಷನರ್ ಇಯಾನ್ ಫೆಲ್ಟನ್ ಹಾಜರಿದ್ದರು.

ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10ರಿಂದ 2 ಹಾಗೂ ಸಂಜೆ 4ರಿಂದ ರಾ.8ರವರೆಗೆ, ಶನಿವಾರ ಹಾಗೂ ಭಾನುವಾರ ಬೆ.11ರಿಂದ ಸಂಜೆ 7ರವರೆಗೆ ಪ್ರವೇಶ ಇರುತ್ತದೆ. ಮೇಳದ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ಟಿಕೆಟ್‌ಗಳಿಗಾಗಿ: www.sciencefestival.in